ಮಾತ್ರ ಬರುತ್ತೇನೆ: ರಿಟರ್ನ್! 'ಎಲ್ಲಿ ಹೋಗಿದ್ದಿರಿ ಸಾರ್? ಏನು ಕತೆ? ಹೇಗಿದ್ದೀರಿ? ನಮ್ಮನ್ನು ಹೀಗೆ ಬಿಟ್ಟು ಹೋಗಬಹುದೇ?' ಎಂದೆಲ್ಲ ಕೇಳುತ್ತಾರೆ ಹುಡುಗರು, ಹುಡುಗಿಯರು. ಅವರ ಮಧ್ಯೆ ಕೆಲವು ವಿವಾಹಿತ ಹೆಣ್ಣು ಗಂಡುಗಳೂ ಇದ್ದಾರೆ. ಯಾಕೆಂದರೆ ನಮ್ಮ ಇಂಗ್ಲಿಷ್ ಕೋಚಿಂಗ್ ಕ್ಲಾಸಿಗೆ ಯಾರು ಬೇಕಾದರೂ ಸೇರಬಹುದು. ಈ ನನ್ನ ವಿದ್ಯಾರ್ಥಿಗಳೆಲ್ಲ ನನ್ನನ್ನ ಬಹಳ ಪ್ರೀತಿಸುತ್ತಾರೆ. ವರ್ಕಿಂಗ್ ಡೇ ಎಲ್ಲಾ ವಿವಿಧ ಬ್ಯಾಚುಗಳಿರುತ್ತವೆ; ನಾನು ಅವರಿಗೆ ಕಲಿಸುತ್ತ, ಅವರಿಗೆ ಮಾತಾಡಲು, ಬರೆಯಲು, ಓದಲು ತರಬೇತಿ ನೀಡುತ್ತ, ಅವರನ್ನು ತಿದ್ದುತ್ತ, ಇರುತ್ತೇನೆ. 'ಓ ಅದೆಲ್ಲಾ ಒಂದು ದೊಡ್ಡ ಕತೆ, ಇನ್ನೊಮ್ಮೆ ಹೇಳ್ತೇನೆ,' ಎಂದು ಅವರ ಬಾಯಿ ಮುಚ್ಚಿಸುತ್ತೇನೆ. ಆದರೆ, ನನ್ನನ್ನು ನೋಡಿದವರು ನನ್ನ ಕಾಲುಗಳಿಗೆ ಕಟ್ಟಿದ ಗಗ್ಗರಗಳನ್ನೂ ನೋಡುತ್ತಾರೆ. 'ಇದೇನು ಸಾರ್, ಕಾಲಿಗೆ?!' ಎಂದು ಕೇಳುತ್ತಾರೆ. ಇದಕ್ಕೆ ನಾನು ಉತ್ತರಿಸಲೇಬೇಕಾಗುತ್ತದೆ. ನಾನನ್ನುತ್ತೇನೆ: 'ಇದೊಂದು ರೀತಿಯ ಮೀಟರ್ ಇದ್ದಂತೆ!' 'ಸ್ಪೀಡೋಮೀಟರ್? ಅಮೆರಿಕದಲ್ಲಿ ಜಾಗಿಂಗ್ ಮಾಡುವವರು ಕಟ್ಟಿಕೋತಾರಲ್ಲ, ಅಂಥದ್ದು?' 'ಅಲ್ಲ, ಇದು ಸ್ಪೀಡೋಮೀಟರ್ ಅಲ್ಲ, ಸ್ಪೀಡ್ ಬ್ರೇಕರ್, ವೇಗ ನಿಯಂತ್ರಕ. ನಾವು ಅತಿವೇಗದಿಂದ ಸಾಗಬಾರದು ಅಂತ. ನಾನೆಲ್ಲಿಗೋ ಹೋಗಿದ್ದೆನಲ್ಲ, ಅಲ್ಲಿ ಕಟ್ಟಿ ಬಿಟ್ಟಿದ್ದಾರೆ. ಅವರ ಪ್ರಕಾರ ನನ್ನ ವೇಗ ಅತಿಯಾಯಿತಂತೆ. ಇಷ್ಟು ವೇಗದಿಂದ ಏನನ್ನೂ ಸಾಧಿಸಲು ಸಾಧ್ಯವಾಗುವುದಿಲ್ಲ ಅಂತ ಅವರ ಅಭಿಪ್ರಾಯ. ನನ್ನ ಒಳ್ಳೆಯದಕ್ಕೇ ಹೀಗೆ ಮಾಡಿದ್ದಾರೆ.'

'ಆದರೂ ಇದು ಸ್ವಲ್ಪ ಪ್ರಿಮಿಟಿವ್ ಆಯ್ತು ಸರ್, ನೀವಿದನ್ನು ಧರಿಸಿಕೊಂಡು ಓಡಾಡುವುದು ಸರಿಯೆಂದು ನನಗೆ ಅನಿಸಲ್ಲ,' ಎಂದ ಒಬ್ಬ ವಿದ್ಯಾರ್ಥಿ.

'ಯಾವುದು ಪ್ರಿಮಿಟಿವ್, ಯಾವುದು ಮಾಡರ್ನ್? ಟ್ರೈಬ್ಯೂನಲ್ ಹೇಳಿದ್ದು ಮರೆತು ಹೋಯಿತ? ವಿ ಮಸ್ಟ್ ಗೋ ಬ್ಯಾಕ್. ಎಷ್ಟು ಹಿಂದಕ್ಕೆ ಸಾಧ್ಯವೋ ಅಷ್ಟು ಹಿಂದಕ್ಕೆ. ಮುಂದಕ್ಕೆ ಹೋಗುವ ದಾರಿ ಇರುವುದು ಹಿಂದಕ್ಕೆ ಹೋಗುವುದರಲ್ಲಿ. ಹಿಂದೆ ಹೋದಂತೆ ನಾವು ಪ್ರೋಟೋಸ್ಟೇಟ್ ತಲಪುತ್ತೇವೆ. ಅಣು ವಿಶ್ಲೇಷಣೆಯಲ್ಲಿ ವಿದ್ಯುನ್ಮಾನ ತರಂಗಗಳನ್ನ ತಲಪಿದ ಹಾಗೆ ಅದು; ತರಂಗಗಳೋ ಕಣಗಳೋ ಅಂದು ಕೂಡ ಗೊತ್ತಾಗುವುದಿಲ್ಲ ನಮಗೆ. ಪ್ರತಿಯೊಂದು ಕಲ್ಚರಿಗೂ ಇಂಥದೇ ಒಂದು ಸ್ಥಿತಿಯಿರುತ್ತದೆ; ಅದನ್ನು ಆಯಾ ಸಂಸ್ಕೃತಿಯವರು ಕಂಡುಕೊಳ್ಳಬೇಕು ಹಾಗೂ ಆ ಸ್ಥಿತಿಯಲ್ಲಿ ಬದುಕಬೇಕು. ಅದುವೇ ಕೋಶಾವಸ್ಥೆ; ಮನುಷ್ಯನ ನಿಜವಾದ ಅವಸ್ಥೆ. ಅದುವೇ ಮೂಲ. ಆದರೆ...

'ಆದರೆ, ಒಂದು ಮಾತು ನೆನಪಿರಬೇಕು. ನಾವು ಮೂಲವನ್ನು ತಲಪಿದರೂ ನಾವೇ ಮೂಲವಲ್ಲ. ಹಾಗಾದರೆ ನಾವು ಯಾರು? ನಾವು ಮೂಲಕ ಮಹಾಶಯರು, ಅರ್ಥಾತ್ ಮೀಡಿಯಮ್‌ಗಳು. ನಮ್ಮ ಮೂಲಕ ಅದೇನೋ ಒಂದು ಹರಿಯುತ್ತದೆ, ಪ್ರಕಟಗೊಳ್ಳುತ್ತದೆ: ಆದಿಮ ಶಕ್ತಿ ಅದು. ಕವಿಯೊಬ್ಬರು ಅದನ್ನು ಅಮೃತವಾಹಿನಿಯೆಂದು ಕರೆದಿದ್ದಾರೆ. ಪ್ರತಿಭಾವಂತರಿಗೆ ಇದು ಗೊತ್ತಿರುತ್ತದೆ; ಆದ್ದರಿಂದ ಅವರು ಯಾವತ್ತೂ ತಮ್ಮನ್ನು ತಾವು ಮೂಲವೆಂದು ತಿಳಿದುಕೊಳ್ಳುವುದಿಲ್ಲ. ತಾವು ಕೇವಲ ಲಿಪಿಕಾರರು ಎಂದು ಕರೆಯುತ್ತಾರೆ. ಅದು ಅಂದಿಗೂ ಸರಿ, ಇಂದಿಗೂ ಸರಿ, ಇಂದಿಗೆ ಡಬ್ಬಲ್ ಸರಿ. ಆದ್ದರಿಂದ ನಮಗೆ ವಿನಯ ಬೇಕು. ತಾವೇ ಮೂಲವೆಂದು ತಿಳಿದುಕೊಳ್ಳುವವರು ವಿನಯವಂತರಲ್ಲ, ಅಹಂಕಾರಿಗಳು. ಅವರು ಎಂದಿಗೂ ಮೇನ್‌ಸ್ಟ್ರೀಮಿಗೆ ಬರುವುದು ಸಾಧ್ಯವಿಲ್ಲ. ಅವರಿಗೆ ಮಾರ್ಜಿನೇ ಗತಿ. ಮಾರ್ಜಿನ್‌ನಲ್ಲಿ ಜಾಗ ಸಿಗಬೇಕಾದರೂ ಅವರು ಸಾಕಷ್ಟು ಶ್ರಮಿಸಬೇಕಾಗುತ್ತದೆ. ಪ್ರತಿಭಾವಂತರು